**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **442** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)** |
| **ಉತ್ತರಿಸುವ ಸಚಿವರು** | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | **10.07.2023** |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಓಯು) ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಎಷ್ಟು ಕೋರ್ಸ್‌ಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ;</td><td>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಓಯು) ಈ ಕೆಳಕಂಡಂತೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಕೋರ್ಸ್‌ಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ;
<table>
<tr><th>ವರ್ಷ</th><th>ಸ್ನಾತಕ ಪದವಿ</th><th>ಸ್ನಾತಕೋತ್ತರ ಪದವಿ</th></tr>
<tr><td>2022-23</td><td>09</td><td>32</td></tr>
<tr><td>2023-24</td><td>08</td><td>31</td></tr>
</table></td></tr>
<tr><td>(ಆ)</td><td>ಎಷ್ಟು ವಿದ್ಯಾರ್ಥಿಗಳು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ (ವಿವರ ನೀಡುವುದು)</td><td>2022-23ನೇ ಸಾಲಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿವರವನ್ನು ಅನುಬಂಧ-'ಅ' ರಲ್ಲಿರಿಸಿದೆ.</td></tr>
<tr><td>(ಇ)</td><td>ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಎಷ್ಟು ವಿಷಯಗಳಲ್ಲಿ ಸೆಮಿಸ್ಟರ್ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತರಲಾಗಿದೆ; ಎಷ್ಟು ವಿಷಯಗಳಲ್ಲಿ ವಾರ್ಷಿಕ ಪರೀಕ್ಷೆ ನಡೆಸುವುದನ್ನು ಮುಂದುವರೆಸಲಾಗಿದೆ; (ಸಂಪೂರ್ಣ ವಿವರ ನೀಡುವುದು)</td><td>ಸೆಮಿಸ್ಟರ್ ಪರೀಕ್ಷಾ ಪದ್ಧತಿ ಮತ್ತು ವಾರ್ಷಿಕ ಪರೀಕ್ಷೆ ಪದ್ಧತಿ ನಡೆಸುತ್ತಿರುವ ವಿವರ ಈ ಕೆಳಕಂಡಂತಿದೆ;
<table>
<tr><th>ಪರೀಕ್ಷಾ ಪದ್ಧತಿ ವಿವರ</th><th>ಸ್ನಾತಕ ಪದವಿ (ಶಿಕ್ಷಣ ಕ್ರಮಗಳು)</th><th>ಸ್ನಾತಕೋತ್ತರ (ಶಿಕ್ಷಣ ಕ್ರಮಗಳು)</th></tr>
<tr><td>ವಾರ್ಷಿಕ ಪದ್ಧತಿ</td><td>04</td><td>04</td></tr>
<tr><td>ಸೆಮಿಸ್ಟರ್ ಪದ್ಧತಿ</td><td>05</td><td>28</td></tr>
</table></td></tr>
<tr><td>(ಈ)</td><td>ಇಗ್ನೋ ಸೇರಿದಂತೆ ಮೊದಲಾದ ದೂರ ಶಿಕ್ಷಣ ವಿಶ್ವವಿದ್ಯಾಲಯಗಳು ವಾರ್ಷಿಕ ಪರೀಕ್ಷೆಯ ಮಾನದಂಡವನ್ನೇ ಅನುಸರಿಸುತ್ತಿವೆ; ಆದರೆ ಕೆಎಸ್‌ಓಯು ಸೆಮಿಸ್ಟರ್ ಪದ್ಧತಿ ಅಳವಡಿಸಿಕೊಂಡಿರುವುದಕ್ಕೆ ಕಾರಣಗಳೇನು;</td><td rowspan="2">UGC (Open and Distance Leaning Programmes and Online Programmes) Regulation, 2020 ರನ್ವಯ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಸಿಬಿಸಿಎಸ್ ಪದ್ಧತಿಯನ್ನು ಅನುಸರಿಸಬೇಕಾಗಿದ್ದು, ಇದರನ್ವಯ ದೂರ ಶಿಕ್ಷಣವು ಸಾಂಪ್ರದಾಯಿಕ ಶಿಕ್ಷಣ ಮಾದರಿಯಲ್ಲಿಯೇ ಇರಬೇಕೆಂದು ಯುಜಿಸಿಯು ತಿಳಿಸಿರುತ್ತದೆ.<br><br>ಅಲ್ಲದೇ, ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಹಿತದೃಷ್ಟಿಯಿಂದ ಸಹ ಚಾಲ್ತಿಯಲ್ಲಿರುವ ಶಿಕ್ಷಣ ಪದ್ಧತಿಯ ಅನುಸಾರ ಶಿಕ್ಷಣ ನೀಡುವುದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕರ್ತವ್ಯವಾಗಿರುತ್ತದೆ. ಇದು ವಿದ್ಯಾರ್ಥಿಗಳ ಹಿತಕ್ಕೆ ಪೂರಕವಾಗಿದೆ.</td></tr>
<tr><td>(ಉ)</td><td>ದೂರ ಶಿಕ್ಷಣ ಪಡೆಯುತ್ತಿರುವ ಬಹುತೇಕರು ವಿವಿಧ ಉದ್ಯೋಗದಲ್ಲಿ ತೊಡಗಿದ್ದು ಅವರ ಓದಿನ ಕನಸಿಗೆ ಸೆಮಿಸ್ಟರ್ ಪದ್ಧತಿ ಅಡ್ಡಿಯಾಗುವುದಿಲ್ಲವೇ;</td></tr>
<tr><td>(ಊ)</td><td>ಸೆಮಿಸ್ಟರ್ ಪರೀಕ್ಷಾ ಪದ್ಧತಿಯನ್ನು ವಾಪಸ್ಸು ಪಡೆದು ಎಂದಿನಂತೆ ವಾರ್ಷಿಕ ಪರೀಕ್ಷಾ ಪದ್ಧತಿಯನ್ನು ಅಳವಡಿಸಿಕೊಳ್ಳುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)</td><td>ಇರುವುದಿಲ್ಲ.</td></tr>
</table>

ಸಂಖ್ಯೆ: ಇಡಿ 20 ಯುಓವಿ 2023

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು